# ಹಿಜಾಬ್ ಸಮಾಜದ ದೃಷ್ಟಿಕೋನದಲ್ಲಿ

-ನಹೀದ್ ಮುಸ್ತಫಾ

**ನನ್ನ ದೇಹದ ವಿಷಯದಲ್ಲಿ ಯಾರೂ ಮೂಗು ತೂರಿಸಬೇಕಾಗಿಲ್ಲ.**

ತನ್ನ ಅಂಗಿಯೊಳಗೆ ಎಕೆ 47 ರೈಫಲನ್ನಿಟ್ಟಿರುವ ಒಬ್ಬ ಮತಾಂಧ ಮೂಲಭೂತವಾದಿ ಮುಸ್ಲಿಮ್ ಉಗ್ರನೆಂಬಂತೆ ಜನರು ನನ್ನನ್ನು ನೋಡುತ್ತಿದ್ದಾರೆಯೇ, ಅಥವಾ ಎಲ್ಲೆಡೆ ದಬ್ಬಾಳಿಕೆಗೊಳಗಾದ ಸ್ತ್ರೀತ್ವದ ಪ್ರತೀಕವೆಂಬಂತೆ ಜನರು ನನ್ನನ್ನು ವೀಕ್ಷಿಸುತ್ತಿದ್ದಾರೆಯೇ ಎಂದು ನನಗೆ ಕೆಲವೊಮ್ಮೆ ಅಚ್ಚರಿಯಾಗುತ್ತದೆ.

ವಿಚಿತ್ರ ದೃಷ್ಟಿ, ದುರುಗುಟ್ಟುವಿಕೆ ಮತ್ತು ಬೆದರಿಕೆಯ ನೋಟಗಳು ನನಗೆ ಹೇರಳವಾಗಿ ಅನುಭವವಾಗುತ್ತಿದೆ. ನಾನು ಹಿಜಾಬ್ ಧರಿಸುತ್ತೇನೆ, ನನ್ನ ತಲೆ, ಕತ್ತು ಮತ್ತು ಗಂಟಲನ್ನು ಮುಚ್ಚುವ ಶಿರವಸ್ತ್ರವನ್ನು ಧರಿಸುತ್ತೇನೆ. ನಾನಿದನ್ನು ಯಾಕೆ ಧರಿಸುತ್ತೇನೆಂದರೆ, ನಾನು ಓರ್ವ ಮಹಿಳೆಯ ದೇಹವು ಆಕೆಯ ಖಾಸಗಿ ವಿಷಯಕ್ಕೆ ಸಂಬಂಧಿಸಿದ್ದಾಗಿದೆ ಎಂದು ನಂಬುವ ಮುಸ್ಲಿಮ್ ಮಹಿಳೆಯಾಗಿರುವುದರಿಂದ.

ಮುಸ್ಲಿಮ್ ತರುಣಿಯರು ಹಿಜಾಬ್‌ನೆಡೆಗೆ ಮರಳುತ್ತಿದ್ದಾರೆ, ಮಹಿಳೆಗೆ ಆಕೆಯ ದೇಹದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಮರಳಿಸಲು ಅವರು ಹಿಜಾಬ್‌ನ ನೈಜ ಉದ್ದೇಶದ ಬೆಳಕಿನಲ್ಲಿ ಅದನ್ನು ಪುನರ್‌ವ್ಯಾಖ್ಯಾನ ಮಾಡುತ್ತಿದ್ದಾರೆ.

ಒಬ್ಬ ವ್ಯಕ್ತಿಯನ್ನು ಲಿಂಗ, ಸೌಂದರ್ಯ, ಆಸ್ತಿ ಅಥವಾ ಸೌಲಭ್ಯದ ಆಧಾರದಲ್ಲಿ ಬೆಲೆಕಟ್ಟಬಾರದೆಂದು ಕುರ್‌ಆನ್ ನಮಗೆ ಕಲಿಸಿಕೊಡುತ್ತದೆ.

> "ಖಂಡಿತವಾಗಿಯೂ ಅಲ್ಲಾಹನ ಬಳಿ ನಿಮ್ಮ ಪೈಕಿ ಅತ್ಯಂತ ಗೌರವಾನ್ವಿತನು ನಿಮ್ಮ ಪೈಕಿ ಅತಿಹೆಚ್ಚು ಭಯಭಕ್ತಿ ಪಾಲಿಸುವವನು." (ಕುರ್‌ಆನ್ 49:13)

ಏನೇ ಆದರೂ, ನನಗೆ ಸಂಬಂಧಿಸಿದಂತೆ ಜನರಿಗೆ ಕಷ್ಟಕಾಲ ಬಂದಿದೆ. ಅದೆಲ್ಲ ಸರಿ, ಕೆನಡಾದಲ್ಲಿ ಹುಟ್ಟಿ ಬೆಳೆದ, ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆದ, ಇನ್ನೂ ಸಣ್ಣ ಪ್ರಾಯದ ನಾನೇಕೆ ಹಿಜಾಬ್ ಧರಿಸಬೇಕು? ಎಂದು ಅವರು ಕೇಳುತ್ತಾರೆ.

ಅಪರಿಚಿತರು ನನ್ನೊಂದಿಗೆ ಗಟ್ಟಿ ಧ್ವನಿಯಲ್ಲಿ ಮತ್ತು ಸರಳ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಅವರು ಕೆಲವೊಮ್ಮೆ ಪದಬಂಧ ಆಡುವಂತೆ ಗೋಚರಿಸುತ್ತಾರೆ. ಕೆನಡಾದ ಹವಾಮಾನಕ್ಕೆ ಒಗ್ಗಿಕೊಂಡು ನಾನು ಹೇಗೆ ಬದುಕುತ್ತಿದ್ದೇನೆಂದು ಅವರು ಕೆಲವೊಮ್ಮೆ ಸೌಮ್ಯವಾಗಿ ಕೇಳುತ್ತಾರೆ. ಆದರೆ ನಾನು ಉತ್ತಮ ಮನಸ್ಥಿತಿಯಲ್ಲಿದ್ದರೆ ಅವರ ಪ್ರಶ್ನೆಗಳು ನನಗೆ ಹಾಸ್ಯಮಯವಾಗಿ ಕಾಣುತ್ತದೆ.

ಉತ್ತರ ಅಮೇರಿಕಾದ ಪೋಷಣೆಯಲ್ಲಿ ಎಲ್ಲ ಸವಲತ್ತುಗಳನ್ನು ಪಡೆದು ಬೆಳೆದ ನಾನು, 21ನೇ ವಯಸ್ಸಿನಲ್ಲಿ ಹಠಾತ್ತನೆ ಹಿಜಾಬ್ ಹಾಗೂ ಇತರ ಉಡುಪುಗಳಿಂದ, ಮುಖ ಮತ್ತು ಅಂಗೈಗಳನ್ನು ಹೊರತಾಗಿಸಿ ದೇಹವನ್ನು ಸಂಪೂರ್ಣವಾಗಿ ಮುಚ್ಚುವ ನಿರ್ಧಾರ ಕೈಗೊಂಡದ್ದು ಏಕೆ?

**ಏಕೆಂದರೆ ಅದು ನನಗೆ ಸ್ವಾತಂತ್ರ್ಯವನ್ನು ನೀಡುತ್ತದೆ.**

ಮಹಿಳೆಯರಿಗೆ ಚಿಕ್ಕಂದಿನಲ್ಲೇ ಅವರ ಮೌಲ್ಯವು ಅವರ ಆಕರ್ಷತೆಯೊಂದಿಗೆ ಸಮಾನ ಅನುಪಾತವನ್ನು ಹೊಂದಿದೆ ಎಂದು ಕಲಿಸಲಾಗುತ್ತದೆ. ಸೌಂದರ್ಯದ ಅಸಹಜ ಒಲವನ್ನು ಹಿಂಬಾಲಿಸಲು ನಾವು ನಿರ್ಬಂಧಿತರಾಗಿದ್ದೇವೆ ಎಂದು ನಾವು ಭಾವಿಸುತ್ತೇವೆ. ಆದರೆ ಅಂತಹ ಒಂದು ಹಿಂಬಾಲಿಕೆಯು ವ್ಯರ್ಥವಾಗಿದೆ ಎಂಬುದನ್ನು ನಾವು ಅರಿಯುವುದೇ ಇಲ್ಲ.

ಮಹಿಳೆಯರು ಇಂತಹ ಒಂದು ದಬ್ಬಾಳಿಕೆಯನ್ನು ತಿರಸ್ಕರಿಸುವಾಗ ಅವರು ಅಪಹಾಸ್ಯ ಮತ್ತು ಅವಹೇಳನವನ್ನು ಎದುರಿಸಬೇಕಾಗುತ್ತದೆ. ಮಹಿಳೆಯರು ಮೇಕಪ್ ಮಾಡದಿದ್ದರೆ, ಕಾಲಿನ ರೋಮವನ್ನು ಬೋಳಿಸದಿದ್ದರೆ ಅಥವಾ ದೇಹವನ್ನು ಪ್ರದರ್ಶಿಸದಿದ್ದರೆ, ಸಮಾಜವು –ಗಂಡಸರು ಮತ್ತು ಹೆಂಗಸರು ಸೇರಿದಂತೆ– ಅವರೊಂದಿಗೆ ವ್ಯವಹರಿಸಲು ಕಷ್ಟಪಡುತ್ತದೆ.

ಪಾಶ್ಚಾತ್ಯ ಜಗತ್ತಿನಲ್ಲಿ, ಹಿಜಾಬ್ ಎಂಬುದು ಬಲವಂತದ ಮೌನ, ಅಥವಾ ಮತಾಂಧತೆ ಅಥವಾ ಆತ್ಮಸಾಕ್ಷಿಯಿಲ್ಲದ ಉಗ್ರವಾದದ ಪ್ರತೀಕವಾಗಿ ಮಾರ್ಪಟ್ಟಿದೆ. ವಾಸ್ತವಿಕವಾಗಿ ಹಿಜಾಬ್ ಎಂದರೆ ಇದೊಂದೂ ಅಲ್ಲ. ಸರಳವಾಗಿ ಹೇಳುವುದಾದರೆ ಅದು ಸಾಮಾಜಿಕವಾದ ಯಾವುದೇ ವರ್ತನೆಯಲ್ಲಿ ಮಹಿಳೆಯ ದೇಹಕ್ಕೆ ಯಾವುದೇ ಪಾತ್ರವಿಲ್ಲ ಎಂಬ ಮಹಿಳೆಯ ದಿಟ್ಟ ಉದ್ಘೋಷಣೆಯಾಗಿದೆ.

**ಹಿಜಾಬ್ ಧರಿಸುವುದರಿಂದಾಗಿ, ಅದು ನನ್ನ ದೇಹದ ಕಡೆಗೆ ವಿಪರೀತ ಗಮನ ಕೊಡುವುದರಿಂದ ನನಗೆ ಮುಕ್ತಿಯನ್ನು ನೀಡಿದೆ.**

ಯಾಕೆಂದರೆ ಈಗ ನನ್ನ ದೇಹವು ಸಾರ್ವಜನಿಕ ವಿಮರ್ಶೆಗೆ ವಿಧೇಯವಾಗಿಲ್ಲ. ನನ್ನ ಸೌಂದರ್ಯ, ಅಥವಾ ಅದರಲ್ಲಿರುವ ನ್ಯೂನತೆ ಜನರ ಚರ್ಚೆಯಿಂದ ದೂರವಾಗಿದೆ.

ನನ್ನ ಕೇಶ ವಿನ್ಯಾಸ ಹೇಗಿದೆಯೆಂದು ಯಾರಿಗೂ ಕಾಣಿಸುವುದಿಲ್ಲ. ನಾನು ಕೂದಲನ್ನು ಚುಚ್ಚಿ ಕಟ್ಟಿದ್ದೇನೋ ಇಲ್ಲವೋ ಎಂಬುದು ಯಾರಿಗೂ ಗೊತ್ತಿಲ್ಲ. ಅಥವಾ ನನ್ನ ದೇಹದಲ್ಲಿ ಅಗೋಚರವಾದ ಕಲೆಗಳಿಯೋ ಎಂಬುದು ಯಾರಿಗೂ ತಿಳಿದಿಲ್ಲ. ಯಾರಿಗೂ ಅದು ಕಾಣುವುದಿಲ್ಲವಾದ್ದರಿಂದ ಯಾರೂ ಅದರ ಕಡೆಗೆ ಗಮನ ಹರಿಸುವುದಿಲ್ಲ.

ಸೌಂದರ್ಯದ ಅಸಂಭವನೀಯ ಪುರುಷ ಮಾನದಂಡಗಳನ್ನು ತಲುಪಲು ಪ್ರಯತ್ನಿಸುವುದು ಬಳಲಿಕೆ ನೀಡುವಂತದ್ದೂ ಪದೇ ಪದೇ ಅಪಹಾಸ್ಯಕ್ಕೆ ಒಳಗಾಗುವಂತದ್ದೂ ಆಗಿದೆ. ನನಗೆ ಗೊತ್ತಿದೆ, ನನ್ನ ಸಂಪೂರ್ಣ ಹದಿಹರೆಯವನ್ನು ನಾನು ಅದನ್ನು ಸಾಧಿಸುವುದಕ್ಕಾಗಿ ವಿನಿಯೋಗಿಸಿದ್ದೇನೆ. ನನ್ನ ಆಹಾರ ಸೇವನೆಯ ಬಗ್ಗೆ ನಾನು ವಿಪರೀತ ಕಾಳಜಿ ವಹಿಸುತ್ತಿದ್ದೆ ಮತ್ತು ಅದಕ್ಕಾಗಿ ಅತಿಯಾಗಿ ಖರ್ಚು ಮಾಡುತ್ತಿದ್ದೆ. ಆದರೆ ಮುಂದಿನ ವಿಶ್ವಸುಂದರಿಯಾಗಬೇಕೆಂಬ ಯಾವುದೇ ಕನಸೂ ನನಗಿರಲಿಲ್ಲ.

ಸೌಂದರ್ಯದ ನಿರ್ವಚನವು ಸದಾ ಬದಲಾಗುತ್ತಿರುತ್ತದೆ. ವೈಫಿಶ್ ಶೈಲಿಯೇ ಉತ್ತಮ, ಅಲ್ಲ ಅದು ಉತ್ತಮವಲ್ಲ, ಅತ್ಲೆಟಿಕ್ ಸೌಂದರ್ಯವೇ ಉತ್ತಮ, ಕ್ಷಮಿಸಿ ಅದು ಕೂಡ ಉತ್ತಮವಲ್ಲ! ಕೆಲವರು ನಮ್ಮನ್ನು ನಂಬಿಸುವಂತೆ, ದೇಹವನ್ನು ಪ್ರದರ್ಶನಕ್ಕಿಡುವ ಮೂಲಕ ಮಹಿಳೆಯರಿಗೆ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಒಂದು ಭ್ರಮೆ ಮಾತ್ರವಾಗಿದೆ. ಅದು ನಮ್ಮ ಆಕಾರೀಕರಣದೆಡೆಗೆ ಗಮನ ಹರಿಸುವಂತೆ ಮಾತ್ರ ನಮ್ಮನ್ನು ಪ್ರಚೋದಿಸುತ್ತದೆ. ನಿಜವಾದ ಸಮಾನತೆಯನ್ನು ಸಾಧಿಸಲಾಗುವುದು ಇತರರ ಗಮನವನ್ನು ಸೆಳೆಯಲು ಮಹಿಳೆಯರು ತಮ್ಮನ್ನು ತಾವೇ ಪ್ರದರ್ಶನಕ್ಕಿಡುವ ಪರಿಸ್ಥಿತಿ ಇಲ್ಲದಾಗುವುದು ಮತ್ತು ತಮ್ಮ ದೇಹವನ್ನು ಪ್ರದರ್ಶನಕ್ಕಿಡದಿರುವ ತಮ್ಮ ನಿರ್ಧಾರವನ್ನು ಸಮರ್ಥಿಸುವ ಪರಿಸ್ಥಿತಿ ಇಲ್ಲದಾಗುವುದಾಗಿದೆ.


**More Information:**

**IslamHouse.com**
http://www.islamhouse.com
Translation: Muhammad Hamza Puttur
Source: http://www.islamicpamphlets.com




# ಸ್ವಾತಂತ್ರ್ಯದೆಡೆಗೆ ನನ್ನ ಪಯಣ

-ಸುಮಯ್ಯಾ ಜೋನ್

ಬಹುಶಃ ಮೂರು ವರ್ಷಗಳ ಹಿಂದೆ, ನಾನು ಇಬ್ಬರು ಮುಸ್ಲಿಮ್ ಸಹೋದರಿಯರ ಮುಂದೆ ನಿಂತು, ದೇವನಲ್ಲಿ (ಅಲ್ಲಾಹನಲ್ಲಿ) ಮತ್ತು ಅವನ ಸಂದೇಶವಾಹಕರಲ್ಲಿರುವ (ಅವರ ಮೇಲೆ ಶಾಂತಿಯಿರಲಿ) ವಿಶ್ವಾಸವನ್ನು ಬಹಿರಂಗವಾಗಿ ಘೋಷಿಸುವ ಮೂಲಕ, ನನ್ನ ಹಿಂದಿನ ಜೀವನದಲ್ಲಿ ಸ್ವತಃ ಹೇರಿಕೊಂಡ ಬಂಧನಗಳಿಂದ ಸ್ವಾತಂತ್ರ್ಯ ಪಡೆದು ನನ್ನನ್ನು ನಾನೇ ವಿಮೋಚನೆಗೊಳಿಸಿದೆ. ಅವಿಶ್ವಾಸದ ಅಂಧಕಾರಗಳಿಂದ ಇಸ್ಲಾಮಿನ ಬೆಳಕಿಗೆ ಕಾಲಿಟ್ಟ ಬಳಿಕ, ಯಾವ ಹಿಜಾಬ್ ನನ್ನನ್ನು ಇಸ್ಲಾಮಿನಿಂದ ದೂರವಿರಿಸಿತ್ತೋ ಅದೇ ಹಿಜಾಬಿನಲ್ಲಿ ನಾನು ಸ್ವಾತಂತ್ರ್ಯವನ್ನು ಕಂಡಿರುವುದು ಸೋಜಿಗವಾಗಿದೆ.

ವಿಚಿತ್ರ ದುರುಗುಡುವಿಕೆಗಳು, ಹೇಳಿಕೆಗಳು ಮತ್ತು ಟೀಕೆಗಳ ಮಹಾ ಪ್ರವಾಹವನ್ನೇ ಎದುರಿಸಬೇಕಾಗಿ ಬಂದರೂ ಹಿಜಾಬಿನೊಳಗೆ ನಾನು ಗೌರವ, ಸುರಕ್ಷಿತತೆ ಮತ್ತು ನೆಮ್ಮದಿಯ ಅನುಭವವನ್ನು ಪಡೆಯುತ್ತಿದ್ದೇನೆ.

ಹಿಜಾಬ್ ಎಂಬುದು 'ಹಜಬ' ಎಂಬ ಅರಬಿ ಪದದಿಂದ ಬಂದಿದೆ. ಇದರರ್ಥ ದೃಷ್ಟಿಯಿಂದ ಅಡಗಿಸುವುದು ಅಥವಾ ಮರೆಮಾಚುವುದು. ಸಮಾಜದಲ್ಲಿ ತಮ್ಮ ಸೌಂದರ್ಯವನ್ನು ಪ್ರದರ್ಶಿಸದ ಮತ್ತು ದಬ್ಬಾಳಿಕೆಯ ವ್ಯವಸ್ಥೆಗೆ ಮಣಿಯದ ಮಹಿಳೆಯರನ್ನು ಅಗೋಚರರು, ಲೈಂಗಿಕಾಸಕ್ತಿಯಿಲ್ಲದವರು ಮತ್ತು ಹಿಂದುಳಿದವರೆಂದು ಕಾಣಲಾಗುತ್ತದೆ. ಕೆಲವೊಮ್ಮೆ ನನ್ನನ್ನು ಒಬ್ಬ ಕ್ರೈಸ್ತ ಸನ್ಯಾಸಿನಿ ಅಥವಾ ಉಗ್ರವಾದಿಯೆಂದು ತಪ್ಪು ತಿಳಿಯಲಾಗುವುದರಿಂದ, ಹೆಚ್ಚಿನ ಮಹಿಳೆಯರಿಗೂ ಈ ಪ್ರತಿಕ್ರಿಯೆಗಳು ನೈಜ ಮುಸ್ಲಿಮ್ ಆಗಿ ಬದುಕುವುದಕ್ಕಿರುವ ಒಂದು ಪರೀಕ್ಷೆಯಾಗಿದೆಯೆಂದು ನನಗೆ ಭಾಸವಾಗುತ್ತಿದೆ.

## ವಾಸ್ತವಿಕವಾಗಿ, ಹಿಜಾಬ್ ಅತ್ಯಂತ ಸರಳವಾಗಿದೆ!

ಹಿಜಾಬ್ ಧರಿಸುವಂತೆ ಆದೇಶಿಸುವ ಮೂಲಕ ಅಲ್ಲಾಹು ಮುಸ್ಲಿಮ್ ಮಹಿಳೆಯರಿಗೆ, ಅವರಿಗೆ ಹೊರಲು ಸಾಧ್ಯವಾಗಿರುವುದನ್ನು ಮಾತ್ರ ವಿಧಿಸಿದ್ದಾನೆ. ಅಲ್ಲಾಹು ಹೇಳಿದನು:

> "ಯಾವುದೇ ವ್ಯಕ್ತಿಗೂ ಅವನ ಸಾಮರ್ಥ್ಯಕ್ಕೆ ಮಿಗಿಲಾಗಿರುವುದನ್ನು ನಾವು ಹೊರಿಸಲಾರೆವು. ಸತ್ಯವನ್ನು ಹೇಳುವ ಒಂದು ದಾಖಲೆಯು ನಮ್ಮ ಬಳಿಯಿರುವುದು...." (ಕುರ್‌ಆನ್ 23:62)

ದುರದೃಷ್ಟವಶಾತ್, ಸೈತಾನನು ಮತ್ತು ಅವನ ಒಡನಾಡಿಗಳು ಮುಸ್ಲಿಮ್ ಮಹಿಳೆಯನ್ನು ಸೃಷ್ಟಿಗಳ ದಾಸ್ಯದೆಡೆಗೆ ಆಹ್ವಾನಿಸುವ ಮೂಲಕ ತನ್ನ ನೈಜ ಸೃಷ್ಟಿಕರ್ತನಿಗೆ ವಿಧೇಯಳಾಗಿ ಬದುಕುವುದರಿಂದ ಆಕೆಯನ್ನು ತಡೆಯುತ್ತಿದ್ದಾರೆ. ಸುಶೀಲತೆ, ಸಭ್ಯತೆ ಮತ್ತು ದೇವಭಕ್ತಿಯನ್ನು ವೈಯುಕ್ತಿಕ ಸ್ವಾತಂತ್ರವನ್ನು ತಡೆಗಟ್ಟುವ ಬೇಡಿಗಳೆಂದು ಚಿತ್ರೀಕರಿಸಲಾಗುತ್ತಿದೆ.

ಸೈತಾನನು ನಮ್ಮ ತಂದೆ ತಾಯಿಗಳಾದ ಆದಮ್ ಮತ್ತು ಹವ್ವಾರನ್ನು ವಂಚಿಸಿದಂತೆ ನಮ್ಮನ್ನೂ ವಂಚಿಸದಿರಲು ನಾವು ಜಾಗರೂಕತೆ ವಹಿಸಬೇಕೆಂದು ಅಲ್ಲಾಹು ನಮಗೆ ಎಚ್ಚರಿಕೆ ನೀಡಿದ್ದಾನೆ. ಫ್ಯಾಶನ್, ಸಂಸ್ಕೃತಿ ಮತ್ತು ಆಧುನಿಕತೆಯ ಮುಖವಾಡದಲ್ಲಿ ಮುಸ್ಲಿಮ್ ಮಹಿಳೆಯರನ್ನು –ಹಾಗೂ ಎಲ್ಲ ಮಹಿಳೆಯರನ್ನೂ– ಅಶ್ಲೀಲತೆಯೆಡೆಗೆ ಸಾಗಿಸುವಲ್ಲಿ ಸೈತಾನನು ಯಶಸ್ವಿಯಾಗಿದ್ದಾನೆ ಮತ್ತು ಯಶಸ್ವಿಯಾಗುತ್ತಲೂ ಇದ್ದಾನೆ.

## ಸ್ತ್ರೀವಾದಿ ಚಳುವಳಿಯ ಉತ್ಕರ್ಷ ದಿನದಿಂದಲೇ ಮುಸ್ಲಿಮ್ ಸ್ತ್ರೀಯರ ಉಡುಗೆ ತೊಡುಗೆ ಮತ್ತು ಸ್ಥಾನಮಾನಗಳ ಬಗ್ಗೆ ವಿಮರ್ಶೆಗಳು ಹೆಚ್ಚುತ್ತಲೇ ಇವೆ.

ಈ 'ವಿಮೋಚನೆಗೊಂಡ' ಮಹಿಳೆಯರ ಪ್ರಕಾರ ಹಿಜಾಬ್ ಶಿರವನ್ನು ಮಾತ್ರವಲ್ಲದೆ ಮನಸ್ಸು, ಇಚ್ಛೆ ಮತ್ತು ಬುದ್ಧಿಯನ್ನೂ ಮರೆಮಾಚುತ್ತದೆಯಂತೆ. ನಮ್ಮ ವಸ್ತ್ರಸಂಹಿತೆಯು ಪುರಾತನಕಾಲದ್ದು ಮತ್ತು ದಬ್ಬಾಳಿಕೆಯಿಂದ ಕೂಡಿದ್ದೆಂದು ಅವರು ಹೇಳುತ್ತಾರೆ. ಆಧುನಿಕ ಕಾಲಘಟ್ಟಕ್ಕೆ ನಮ್ಮ ಹಿಜಾಬ್ ಹೊಂದಿಕೊಳ್ಳುವುದಿಲ್ಲವೆಂದು ಅವರು ಹೇಳುವಾಗ ಅವರು ಕೇವಲ ಅಜ್ಞಾನದಿಂದ ಮಾತನಾಡುತ್ತಾರೆ. ವಾಸ್ತವಿಕವಾಗಿ ನೈತಿಕ ಮೌಲ್ಯಗಳು ಪದೇ ಪದೇ ಇಳಿಮುಖವಾಗುತ್ತಿರುವ ಆಧುನಿಕ ಜಗತ್ತಿನ ಪರಿಸ್ಥಿತಿಗಳು ಹಿಜಾಬ್ ಧರಿಸುವುದನ್ನು ಹೆಚ್ಚು ಹೆಚ್ಚು ಅನಿವಾರ್ಯಗೊಳಿಸುತ್ತದೆ.

ನಾಗರಿಕತೆಯ ಉಗಮದ ಕಾಲದಿಂದಲೇ ನಿಲುವಂಗಿಗಳು ಮತ್ತು ಶಿರವಸ್ತ್ರಗಳು ಎಲ್ಲ ಸಮಯದಲ್ಲೂ ಧರ್ಮಶ್ರದ್ಧೆ ಮತ್ತು ದೇವಭಯದೊಂದಿಗೆ ಥಳಕು ಹಾಕಿಕೊಂಡಿದ್ದವು. ಪೂರ್ವಕಾಲದ ಪ್ರವಾದಿಗಳ ಮತ್ತು ಅವರೊಂದಿಗಿದ್ದ ಮಹಿಳೆಯರ ಬಗ್ಗೆ ಕ್ರೈಸ್ತರು ರಚಿಸಿದ ಚಿತ್ರಗಳಲ್ಲೂ ಇದನ್ನು ಕಾಣಬಹುದಾಗಿದೆ. ಅಂದರೆ ಆ ಎಲ್ಲ ಚಿತ್ರಗಳಲ್ಲೂ (ಉದಾ: ಮೇರಿ) ಮುಸ್ಲಿಮ್ ಸ್ತ್ರೀಪುರುಷರಿಗೆ ಧರಿಸಲು ಆದೇಶಿಸಲಾದ ಅದೇ ಉಡುಪುಗಳನ್ನು ಕಾಣಬಹುದಾಗಿದೆ. ಸಭ್ಯತೆಯ ಈ ಉಡುಪು ಕುರ್‌ಆನ್‌ನ ವಚನದಲ್ಲಿ (7:26) ಪ್ರತಿಫಲನಗೊಂಡಿದೆ. ಅಲ್ಲಾಹು ಹೇಳಿದನು:

> "ಓ ಆದಮ್ ಸಂತತಿಗಳೇ! ನಿಮ್ಮ ಗುಹ್ಯಭಾಗಗಳನ್ನು ಮರೆಮಾಚುವ ಉಡುಪನ್ನು ಮತ್ತು ಅಲಂಕಾರ ವಸ್ತ್ರವನ್ನು ನಾವು ನಿಮಗೆ ನೀಡಿರುವೆವು. ಧರ್ಮನಿಷ್ಠೆಯ ಉಡುಪು ಯಾವುದೋ ಅದು ಅತ್ಯುತ್ತಮವಾದುದು."

## ಅಲ್ಲಾಹು ಮುಸ್ಲಿಮ್ ಮಹಿಳೆಗೆ ಹಿಜಾಬ್ ಆಜ್ಞಾಪಿಸಿದ್ದು ಆಕೆಯನ್ನು ಹಾನಿಯಿಂದ ರಕ್ಷಿಸುವುದಕ್ಕಾಗಿದೆ

ತನ್ನ ಸೃಷ್ಟಿಯ ಬಗ್ಗೆ ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ. ಅಸಭ್ಯ ವಸ್ತ್ರಧಾರಣೆ, ಸುಗಂಧಪೂರಿತ ಶರೀರ ಮತ್ತು ಮೇಕಪ್ ಮಾಡಿದ ಮುಖಗಳೊಂದಿಗೆ ಮಹಿಳೆಯರು ತಮ್ಮನ್ನು ತಾವೇ ಪ್ರದರ್ಶನಕ್ಕಿಡುವಾಗ, ಅದು ಸಮಾಜದಾದ್ಯಂತ ಲೈಂಗಿಕ ಅರಾಜಕತೆ ಹೆಚ್ಚಾಗಲು ಕಾರಣವಾಗುತ್ತದೆಯೆಂದು ಅಲ್ಲಾಹು ಚೆನ್ನಾಗಿ ಅರಿತಿದ್ದಾನೆ. ತಪ್ಪು ಮಾರ್ಗದರ್ಶನಕ್ಕೊಳಗಾದ ಕೆಲವರು, ನಾವು ಧರಿಸುವ ಹಿಜಾಬ್ ಚಲಿಸುವ ಸೆರೆಮನೆಯಾಗಿದೆ, ಮತ್ತು ಅದು ನಮ್ಮ ಮನಸ್ಸು, ಬದುಕು ಹಾಗೂ ಹೃದಯವನ್ನು ನಿರ್ಬಂಧಿಸುತ್ತದೆಯೆಂದು ಭಾವಿಸುತ್ತಾರೆ. ವಾಸ್ತವಿಕವಾಗಿ ಇದಾವುದೂ ಸತ್ಯವಲ್ಲ. ನಾವು ಅವರ ಸಂಚಿಗೆ ಬಲಿಯಾಗದಿರಲು ಹಿಜಾಬ್ ಎಂದರೆ ಅದು ವಿಮೋಚನೆ, ಘನತೆ ಮತ್ತು ಸಂರಕ್ಷಣೆಯ ಮೂಲವಾಗಿದೆ ಎಂಬುದನ್ನು ಅರಿತುಕೊಳ್ಳಲು ಸಿದ್ಧರಾಗಬೇಕಾಗಿದೆ.

## ಹಿಜಾಬ್ ಎಂದರೇನು....

- ✔ ಸೃಷ್ಟಿಕರ್ತನಿಗೆ ವಿಧೇಯತೆ ತೋರುವುದರ ಸಂಕೇತ
- ✔ ಘನತೆ ಮತ್ತು ಗೌರವದ ಸಂಕೇತ
- ✔ ವಿಶ್ವಾಸ ಮತ್ತು ನಂಬಿಕೆಯ ಸಂಕೇತ
- ✔ ಸಭ್ಯತೆಯ ಸಂಕೇತ
- ✔ ಪರಿಶುದ್ಧತೆಯ ಸಂಕೇತ
- ✔ ಲಜ್ಜೆಯ ಸಂಕೇತ
- ✔ ಸಾತ್ವಿಕತೆಯ ಸಂಕೇತ
- ✔ ಒಂದು ಗುರಾಣಿ

## ಹಿಜಾಬ್ ಏನಲ್ಲ.....

- ✘ ಅದು ಹೊಸ ಸಂಪ್ರದಾಯವಲ್ಲ. ಯೇಸುವಿನ ತಾಯಿ ಮೇರಿ ಮೊದಲಾದ ಪೂರ್ವಕಾಲದ ಸಾತ್ವಿಕ ಮಹಿಳೆಯರ ಮಾದರಿಯನ್ನು ಮುಸ್ಲಿಮ್ ಮಹಿಳೆಯರು ಹಿಂಬಾಲಿಸುತ್ತಿದ್ದಾರೆ.
- ✘ ಅದು ದಬ್ಬಾಳಿಕೆಯ ಸಂಕೇತವಲ್ಲ.
- ✘ ಮುಸ್ಲಿಮ್ ಮಹಿಳೆಯರು ಮತ್ತು ವಿವಾಹ ನಿಷಿದ್ಧರಾದ ಪುರುಷರು ಮಾತ್ರ ಇರುವ ಸ್ಥಳಗಳಲ್ಲಿ ಹಿಜಾಬ್ ಧರಿಸಬೇಕಾದ ಅಗತ್ಯವಿಲ್ಲ.
- ✘ ತನ್ನ ದೃಷ್ಟಿಕೋನ ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವ, ಅಥವಾ ವಿದ್ಯಾಭ್ಯಾಸ ಹಾಗೂ ಉದ್ಯೋಗವನ್ನು ಹೊಂದುವ ಮಹಿಳೆಯ ಸ್ವಾತಂತ್ರ್ಯಕ್ಕೆ ಅದೊಂದು ಅಡ್ಡಿಯಲ್ಲ.
- ✘ ಅದು ಮುಸ್ಲಿಮೇತರರನ್ನು ಕೆಣಕುವ, ಅವರನ್ನು ವಿರೋಧಿಸುವ ಅಥವಾ ಅವರ ವಿರುದ್ಧ ಪ್ರತಿಭಟನೆ ಸೂಚಿಸುವುದಕ್ಕಿರುವ ಸಂಕೇತವಲ್ಲ.
- ✘ ಅದು ಚಲಿಸುವ ಸೆರೆಮನೆಯಲ್ಲ.

> "(ಅಲ್ಲಾಹನಿಗೆ) ಶರಣಾಗಿರುವ ಪುರುಷರು ಮತ್ತು ಸ್ತ್ರೀಯರು, ವಿಶ್ವಾಸಿಗಳಾಗಿರುವ ಪುರುಷರು ಮತ್ತು ಸ್ತ್ರೀಯರು, ವಿಧೇಯರಾಗಿರುವ ಪುರುಷರು ಮತ್ತು ಸ್ತ್ರೀಯರು, ಸತ್ಯಸಂಧರಾಗಿರುವ ಪುರುಷರು ಮತ್ತು ಸ್ತ್ರೀಯರು, ತಾಳ್ಮೆ ವಹಿಸುವ ಪುರುಷರು ಮತ್ತು ಸ್ತ್ರೀಯರು, ವಿನಮ್ರರಾಗಿರುವ ಪುರುಷರು ಮತ್ತು ಸ್ತ್ರೀಯರು, ದಾನಧರ್ಮ ಮಾಡುವ ಪುರುಷರು ಮತ್ತು ಸ್ತ್ರೀಯರು, ಉಪವಾಸವನ್ನಾಚರಿಸುವ ಪುರುಷರು ಮತ್ತು ಸ್ತ್ರೀಯರು, ತಮ್ಮ ಗುಪ್ತಾಂಗಗಳನ್ನು ಸಂರಕ್ಷಿಸುವ ಪುರುಷರು ಮತ್ತು ಸ್ತ್ರೀಯರು, ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವ ಪುರುಷರು ಮತ್ತು ಸ್ತ್ರೀಯರು. ಇವರಿಗೆ ಅಲ್ಲಾಹು ಪಾಪಮುಕ್ತಿಯನ್ನು ಮತ್ತು ಮಹಾ ಪ್ರತಿಫಲವನ್ನು ಸಿದ್ಧಗೊಳಿಸಿರುವನು." (ಕುರ್‌ಆನ್ 33:35)